JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ತುಳು ನಾಡ ಸಂಸ್ಕೃತಿ

*(ಇದು ಪಂಜುರ್ಲಿ ದೇವರ ಕಥೆ)*

**ಶ್ರೀ ಶಿವಕುಮಾರ.ಜಿ**
ಉಪನ್ಯಾಸಕರು
ಕನ್ನಡ ಅಧ್ಯಯನ ವಿಭಾಗ
ವಿ.ಶ್ರೀ.ಕೃ.ವಿ.,ಸ್ನಾತಕೋತ್ತರ ಕೇಂದ್ರ,
ನಂದಿಹಳ್ಳಿ-583119
ಸಂಡೂರು ತಾ||,ಬಳ್ಳಾರಿ ಜಿಲ್ಲೆ
shivukumargpr@gmail.com

***ಸಾರಾಂಶ:*** ಭಾರತ ಸಂಸ್ಕೃತಿಯ ತವರೂರು, ಅದರಲ್ಲೂ ಕರ್ನಾಟಕ ಆಚಾರ, ವಿಚಾರ ಕಲೆ ಸಂಸ್ಕೃತಿ ಒಂದು ಹೆಜ್ಜೆ ಮುಂಚೂಣಿಯಲ್ಲಿ ಇದೆ ಎಂದರೆ ತಪ್ಪಾಗಲಾರದು. ನಮ್ಮ ಕರುನಾಡಿನಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಹಬ್ಬ, ಆಚರಣೆಗಳನ್ನು ಆಚರಿಸುತ್ತಾರೆ. ಪ್ರತೀ ಹಬ್ಬ ಆಚರಣೆಗಳಿಗೂ ನಮ್ಮ ಪೂರ್ವಜರು ಒಂದೊಂದು ರೀತಿಯ ಜಾನಪದ ಕಥೆಗಳನ್ನು ಕಟ್ಟಿ ಕೊಟ್ಟಿದ್ದಾರೆ. ಆ ರೀತಿಯಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ 'ಮೊಹರಂ ' ಎಂಬ ಆಚರಣೆ ವಿಷೇಷವಾದರೆ ನಮ್ಮ ದಕ್ಷಿಣ ಭಾಗದಲ್ಲಿ ಡೊಳ್ಳು ಕುಣಿತ , ಮಹದೇಶ್ವರನ ಆಚರಣೆಗಳು ಬಹು ಪಾಲು ಪ್ರಾಮುಖ್ಯತೆಯನ್ನು ಹೊಂದಿದೆ. ಅದರಂತೆ ನಮ್ಮ ಕರಾವಳಿ ಭಾಗಕ್ಕೆ ಬಂದರೆ ಅವರ ಆಚರಣೆಗಳೂ ಕೂಡಾ ಯಾರಿಗೂ ಕಡಿಮೆಯಿಲ್ಲ ಎನ್ನುವಂತೆ ಆಚರಿಸುತ್ತಾರೆ. ನಮ್ಮ ಕರಾವಳಿ ಪ್ರದೇಶದಲ್ಲಿ ವಿಧ ವಿಧವಾದ ಆಚರಣೆಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಪಪ್ರಮುಖವಾದವು ಎಂದರೆ ಕೋಲಾ, ಭೂತಾರಾಧನೆ, ಧೈವಾ ಮುಂತಾದವುಗಳು. ಈ ಲೇಖನದ ಮೂಲಕ ಕರಾವಳಿಯ ಭಾಗದಲ್ಲಿ ಆಚರಿಸುವ ಪ್ರಮುಖವಾದ ಪಂಜುರ್ಲಿ ಧೈವ ಎಂಬ ಆಚರಣೆಯ ಬಗ್ಗೆ ತಿಳಿಯೋಣ.

***ಮುಖ್ಯ ಪದಗಳು* - ಕಲೆ ಸಂಸ್ಕೃತಿ , ಪಂಜುರ್ಲಿ ಧೈವ, ಭೂತಾರಾಧನೆ.**

**ಪೀಠಿಕೆ:**

ದಕ್ಷಿಣ ಕನ್ನಡ ಭಾಗವನ್ನು ಕರಾವಳಿ ಕರ್ನಾಟಕ ಹಾಗೂ ತುಳುನಾಡು ಅಂತೆಲ್ಲಾ ಕರೆಯುತ್ತಾರೆ. ಇಂಥ ಕರಾವಳಿ ತೀರಾ ವಿಶಿಷ್ಟ ಸಂಸ್ಕೃತಿಯ ಆಚರಣೆಗೆ ಪ್ರಸಿಧ್ಧಿಯನ್ನು ಪಡೆದಿದೆ. ಅದರಲ್ಲೂ ಈ ಭಾಗದಲ್ಲಿರುವ ಧೈವಾರಾಧನೆ ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲೇ ಇನ್ನೆಲ್ಲೂ ಕೂಡಾ ಕಾಣಲಾಗದಂತಹ ಸಂಸ್ಕೃತಿ. ಆದ್ದರಿಂದಲೇ ಅದು ವಿಶೇಷ ಸ್ಥಾನವನ್ನು ಪಡೆದಿದೆ. ಅದರಲ್ಲೂ ಜನರಲ್ಲಿ ನಂಬಿಕೆ ಅಡಕವಾಗಿದೆ. ಕರಾವಳಿ ಪ್ರದೇಶದಲ್ಲಿ ವಿವಿಧ ಬಗೆಯ ಧೈವಗಳಿವೆ ಅದರಲ್ಲೂ ಬಹಳ ಮುಖ್ಯವಾದುದೆಂದರೆ, 'ಪಂಜುರ್ಲಿ ಧೈವಾರಾಧನೆ'.

**ಪಂಜುರ್ಲಿ ಧೈವದ ಇತಿಹಾಸ:**

ಒಂದೊಮ್ಮೆ ಪಾರ್ವತಿ ದೇವಿಯ ಅನುಸಾರವಾಗಿ ಕೈಲಾಸನಾಥನಾದ ಶಿವನು ಒಂದು ಅರಣ್ಯವನ್ನು ನಿರ್ಮಾಣ ಮಾಡುತ್ತಾನೆ. ಈ ಅರಣ್ಯವನ್ನು ದೇವರ ಕಾಡು ಎನ್ನಲಾಗುತ್ತಿರುತ್ತದೆ. ಒಂದು ದಿನ ಈ ಅರಣ್ಯಕ್ಕೆ ಪರಮಾತ್ಮ ಶಿವನು ಭೇಟೆಗೆಂದು ತೆರಳುತ್ತಾರೆ.

ಭೇಟೆಗೆ ಹೊರಟ ಸಮಯದಲ್ಲಿ ಭಗವಂತನ ಕಣ್ಣಿಗೆ ಹಂದಿ ಮತ್ತು ಹಂದಿಯ ಮರಿಗಳು ಕಾಣುತ್ತವೆ. ಆಗ ಭೇಟೆಗಾರನನ್ನು ಕಂಡು ಭಯದಿಂದ ದೊಡ್ಡ ದೊಡ್ಡ ಹಂದಿಗಳು ದಿಕ್ಕಾಪಾಲಾಗಿ ಓಡಿ ಅಲ್ಲಲ್ಲಿ ಅವಿತುಕೊಂಡುಬಿಡುತ್ತವೆ. ಆದರೆ ಮರಿ ಹಂದಿಗಳು ಓಡಲಾಗದೆ ಅಲ್ಲಿಯೇ ನಿಂತು ಬಿಡುತ್ತವೆ. ಈ ಸಣ್ಣ ಸಣ್ಣ ಹಂದಿಮರಿಗಳನ್ನು ಕಂಡ ಪರಮಾತ್ಮನು ಮೈ ಮರೆತು ನಿಂತಲ್ಲಿಯೇ ಮೌನವಾಗಿ ನಿಂತುಬಿಡುತ್ತಾರೆ.

ಭಯದಿಂದ ನಡುಗುತ್ತಿದ್ದ ಆ ಹಂದಿಮರಿಗಳ ಮುಗ್ದತನಕ್ಕೆ ಮನಸೋತ ಕೈಲಾಸನಾಥನು ಅವುಗಳನ್ನು ಭೇಟೆಯಾಡದೆ ಒಂದು ಹಂದಿ ಮರಿಯನ್ನು ತೆಗೆದುಕೊಂಡು ಬಂದು ಬಿಡುತ್ತಾರೆ.

ಆ ಪುಟ್ಟ ಮರಿ ಹಂದಿಯನ್ನು ಪಾರ್ವತಿಗೆ ತೋರಿಸಿ ನಡೆದ ಘಟನೆಯನ್ನು ವಿವರಿಸುತ್ತಾರೆ. ನಂತರ ಹಂದಿಯನ್ನು ಪರಮಾತ್ಮ ತನ್ನ ನಿವಾಸದ ಮುಂದೆ ಕಟ್ಟಿ ಹಾಕುತ್ತಾರೆ. ಆಗ ಶಿವ ಪಾರ್ವತಿಯರಿಬ್ಬರು ಅದನ್ನು ಪಾಲನೆ ಪೋಷಣೆ ಮಾಡಿ ಬೆಳೆಸುತ್ತಾರೆ. ಹೀಗೆ ಗಂಡ ಹೆಂಡತಿಯರಿಬ್ಬರು ಸಾಕಿ ದೊಡ್ಡದಾಗಿ ಮಾಡುತ್ತಾರೆ.

ಆ ಹಂದಿಯು ಕೂಡಾ ಚೆನ್ನಾಗಿ ತಿಂದು ದಷ್ಟ ಪುಷ್ಟವಾಗಿ ಬೆಳೆಯುತ್ತದೆ. ಹೀಗೆ ಇರುವಾಗ ಒಂದು ದಿನ ಹಂದಿಯು ಭತ್ತದ ಗದ್ದೆಯ ಒಳಕ್ಕೆ ನುಗ್ಗಿ ಅದನ್ನು ಮೇಯ್ದು ಗದ್ದೆಯನ್ನು ತುಳಿದು ಬೆಳೆಯನ್ನು ನಾಶ ಮಾಡಿಬಿಡುತ್ತದೆ. ಈ ಘಟನೆಯಿಂದ ತುಂಬಾ ದುಖಿಃತರಾದ ದೇವಿ ಪಾರ್ವತಿಯು ಶಿವನ ಬಳಿ ಬಂದು

"ನಾವು ಸಾಕಿದ ಹಂದಿ ನಾವು ಬೆಳೆಸಿದ ಗದ್ದೆಯನ್ನು ತುಳಿದು ಹಾಳು ಮಾಡಿತು" ಎಂದು ತನ್ನ ದುಃಖವನ್ನು ಪತಿಯ ಮುಂದೆ ಹೇಳಿಕೊಳ್ಳುತ್ತಾರೆ. ಇದರಿಂದ ಕೋಪಗೊಂಡ ಭಗವಂತನು ತನ್ನ ಬಾಣದಿಂದ ಹಂದಿಯ ಮೇಲೆ ಪ್ರಹಾರ ಮಾಡುತ್ತಾರೆ.

ಬಾಣ ತಾಗಿದ ಹಂದಿ ನೋವಿನಿಂದ ನರಳಾಡಲು ಶುರು ಮಾಡುತ್ತದೆ. ನೋವಿನಿಂದ ನರಳಾಡಿ ಛೀಂಕಾರದ ಶಬ್ದದಿಂದ ಚೀರುತ್ತಾ ಶಿವ ಮತ್ತು ಪಾರ್ವತಿಯ ವಾಸಸ್ಥಳದ ಮುಂದೆ ಒದ್ದಲಾಡಿ ಸಾಯುತ್ತದೆ. ಈ ಭೀಕರತೆಯನ್ನು ಕಂಡ ಪಾರ್ವತಿಯ ಮನಸ್ಸಲ್ಲೇ ಅನುಕಂಪ ಮೂಡಲು ಶುರು ಮಾಡುತ್ತದೆ. ಆಗ ದೇವಿ ಶಿವನ ಬಳಿಗೆ ಬಂದು

"ನಾವು ನಮ್ಮ ಮಗುವಿನಂತೆ ಆಹಾರವನ್ನು ನೀಡಿ, ಅದಕ್ಕೆ ಪ್ರೀತಿಯನ್ನು ತೋರಿಸಿ ಕೊನೆಗೆ ನಾವೇ ಕೊಲ್ಲುವುದು ಸರಿಯಲ್ಲ. ಆದುದ್ದರಿಂದ ಆ ಹಂದಿಯನ್ನು ಉಳಿಸಿ ಪರಮಾತ್ಮ" ಎಂದು ತನ್ನ ನೋವಿನ ಅಳಲನ್ನು ಭಗವಂತನಲ್ಲಿ ತೋಡಿಕೊಳ್ಳುತ್ತಾಳೆ.

"ಅಕಸ್ಮಾತ್ ನೀವು ಹಂದಿಯನ್ನು ಬದುಕಿಸದೇ ಹೋದರೆ ನಾನು ಒಂದು ತುತ್ತು ಆಹಾರವನ್ನು ಸೇವಿಸುವುದಿಲ್ಲ, ಒಂದು ಹನಿ ನೀರನ್ನು ಕುಡಿಯುವುದಿಲ್ಲ, ಎಂದು ಹಠ ಹಿಡಿಯುತ್ತಾಳೆ."

ಪತ್ನಿಯ ಹಠಕ್ಕೆ ಮನಸೋತ ಭಗವಂತನು ತಾನೇ ಕೊಂದ ಹಂದಿಗೆ ಮರು ಜೀವ ನೀಡಿ ಅದನ್ನು ಉಳಿಸುತ್ತಾರೆ. ಯಾವ ಜಾಗಕ್ಕೆ ಬಾಣ ತಗುಲಿ ಗಾಯವಾಗಿರುತ್ತೋ ಆ ಭಾಗವನ್ನು ಭಗವಂತ ಸವರಿದ ತಕ್ಷಣ ಗಾಯ ಮಾಯವಾಗಿಬಿಡುತ್ತದೆ.

ಸತ್ತು ಮತ್ತೆ ಹುಟ್ಟಿದ ಹಂದಿಯು ಭಗವಂತನಲ್ಲಿ "ನನಗೆ ಯಾಕೆ ಉಳಿಸಿದ್ದೀರಿ?" ಎಂದು ಪ್ರಶ್ನೆ ಕೇಳಿತು, ಆಗ ಭಗವಂತನಾದ ಶಿವನು "ಭೂಲೋಕದಲ್ಲಿ ಅಧರ್ಮವು ದಿನೇ ದಿನೇ ಹೆಚ್ಚಾಗುತ್ತಿದೆ, ಅಲ್ಲಿ ಭಗವಂತನನ್ನು ನಂಬಿರುವ ಜನರನ್ನು ರಕ್ಷಣೆ ಮಾಡುವುದಕ್ಕಾಗಿಯೇ ನಿನ್ನನ್ನು ಉಳಿಸಿದ್ದೇನೆ, ಇದರೊಂದಿಗೆ ಕೆಟ್ಟವರ ಸಂಹಾರವು ನಡೆಯಬೇಕಾಗಿದೆ, ಆದ್ದರಿಂದ ನಿನ್ನನ್ನು ಭೂಲೋಕಕ್ಕೆ ಕಳುಸುತ್ತಿದ್ದೇನೆ" ಎಂದು ಶಂಕರನು ಆ ಹಂದಿಗೆ 'ಗಣಮಣಿ' ಎಂದು ನಾಮಕರಣ ಮಾಡಿ ಆ ಹಂದಿಯನ್ನು ಭೂಲೋಕಕ್ಕೆ ಕಳುಹಿಸುತ್ತಾನೆ.

ಶಿವ ಪಾರ್ವತಿ ಇಬ್ಬರು ಹಂದಿಗೆ "ಧರ್ಮವನ್ನು ಉಳಿಸು" ಎಂದು ಆಶೀರ್ವದಿಸುತ್ತಾರೆ. ಈ ರೀತಿಯಾಗಿ ತಾಯಿ ಪಾರ್ವತಿ ದೇವಿಯು ತಂದೆ ಈಶ್ವರನು ಸಾಕಿದ ಹಂದಿಯನ್ನು ಧರ್ಮ ಸಂಸ್ಥಾಪನೆಗೆಂದು ಭೂ ಲೋಕಕ್ಕೆ ಕಳುಹಿಸುತ್ತಾರೆ.

ಕೈಲಾಸದಿಂದ ಭೂಲೋಕಕ್ಕೆ ಬಂದ ಹಂದಿಯು ಮೊದಲು ತನ್ನ ಪಾದವನ್ನು ಇರಿಸಿದ್ದು ಕುಕ್ಕೆಯಲ್ಲಿ. ಸುಬ್ರಹ್ಮಣ್ಯದಲ್ಲಿ ಬಂದು ಹಿಳಿದ ಗಣಮಣಿಯು, ಕುಮಾರ ಧಾರೆಯ ನದಿಯಲ್ಲಿ ಸ್ನಾನ ಮಾಡಿ 'ನಳ್ಯಾಡಿ ಬೀಡಿ'ಗೆ ಬರುತ್ತದೆ.

ಈ ನಳ್ಯಾಡಿ ಬೀಡು ಈಗಿನ ಧರ್ಮಸ್ಥಳದ ಹತ್ತಿರದಲ್ಲಿದೆ. ಆ ಹಂದಿ ನಳ್ಯಾಡಿ ಬೀಡಿಗೆ ಬಂದಾಗ ಅಲ್ಲಿ ಶಿವನ ಭಕ್ತೆಯಾದ ಅಮ್ಮಾ ಬಳ್ಳಾಳ್ತಿಯೆಂಬಾಕೆಯ ಗಂಡನಿಗೆ ಒಂದು ಬಗೆಯ ಭಯಂಕರ ರೋಗ ಬಂದಿರುತ್ತದೆ. ಅಮ್ಮು ಬಳ್ಳಾಳ್ತಿ ತನ್ನ ಗಂಡನ ಸ್ಥಿತಿಯನ್ನು ಕಂಡ ದುಃಖಿತಳಾಗಿರುತ್ತಾಳೆ.

ಆಗ ಅಲ್ಲಿಗೆ ಬಂದ ಗಣಮಣಿಯು ಅಮ್ಮು ಬಳ್ಳಾಳ್ತಿಯವರನ್ನು ಕಂಡು "ತಾಯಿ ನಿನ್ನ ಈ ಕಣ್ಣೀರಿಗೆ ಕಾರಣವೇನು " ಎಂದು ಕೇಳಲು, ಆಗ ಅಮ್ಮು ಬಳ್ಳಾಳ್ತಿ ತನ್ನ ಗಂಡನ ಸ್ಥಿತಿಗತಿಯನ್ನು ಹಾಗೂ ಅವರಿಗಿರುವ ಖಾಯಿಲೆಯ ಬಗ್ಗೆ ಗಣಮಣಿಗೆ ವಿವರಿಸುತ್ತಾಳೆ.

ಆಗ ಗಣಮಣಿಯು ಅಮ್ಮು ಬಳ್ಳಾಳ್ತಿಗೆ ಸಮಾಧಾನ ಪಡಿಸುತ್ತಾ "ಕಣ್ಣೀರು ಹಾಕಬೇಡ ತಾಯಿ, ನಾನು ಕೈಲಾಸದಿಂದ ಬರುವಾಗ ಒಂದು ಬೇರಿನ ಮೂಲಿಕೆಯ ಔಷಧಿಯನ್ನು ತಂದಿದ್ದೇನೆ. ಈ ಔಷಧಿಯಿಂದ ನಿಮ್ಮ ಪತಿರಾಯ ಗುಣವಾಗುತ್ತಾರೆ." ಎಂದು ಅಭಯ ನೀಡುತ್ತಾ ಆ ಬೇರಿನ ಔಷಧಿಯನ್ನು ಅಮ್ಮು ಬಳ್ಳಾಳ್ತಿಗೆ ನೀಡುತ್ತದೆ.

ಆ ಔಷಧಿಯಿಂದ ಬಳ್ಳಾಳ್ತಿಯವರ ಪತಿ ಭೀಮಣ್ಣ ಪೆರ್ಗಡಿ ಗುಣಮುಖರಾಗಿ ಮೊದಲಿನಂತೆ ಆಗುತ್ತಾರೆ. ಅಂದು ತನ್ನ ಗಂಡನ ಖಾಯಿಲೆ ವಾಸೆಯಾದುದ್ದನ್ನು ಕಂಡ ಬಳ್ಳಾಳ್ತಿ ಸಂತೋಷಗೊಂಡು ಗಣಮಣಿಯನ್ನು "ನಿನ್ನ ಹೆಸರೇನು ಕುಮಾರ" ಎಂದು ಕೇಳುತ್ತಾಳೆ ಅದಕ್ಕೆ ಉತ್ತರಿಸಿದ ಗಣಮಣಿ, "ಕೈಲಾಸದಲ್ಲಿ ಭಗವಂತ ಶಿವನು ನನಗೆ ಗಣಮಣಿ" ಎಂದು ನಾಮಕರಣ ಮಾಡಿದ್ದರು.

ಆದರೆ ಭೂಲೋಕಕ್ಕೆ ಬಂದ ನಂತರ ನನಗೆ ಇದುವರೆಗೂ ಯಾರು ಕೂಡಾ ಹೆಸರಿಟ್ಟಿಲ್ಲ ಎನ್ನುತ್ತಾನೆ.

"ನನಗೆ ನೀವು ಅನ್ನ ಹಾಕಿ ಮಾತೃ ಸ್ಥಾನ ತುಂಬಿದ್ದೀರಿ, ನಿಮ್ಮ ಪತಿ ನನಗೆ ಪಿತೃ ಸ್ಥಾನ ತುಂಬಿದ್ದಾರೆ, ಆದ್ದರಿಂದ ನನ್ನನ್ನು ನೀವು ಇನ್ನುಮುಂದೆ 'ಅಣ್ಣಪ್ಪ' ಎನ್ನಬಹುದು" ಎನ್ನುತ್ತಾನೆ. ಅಂದಿನಿಂದ ಗಣಮಣಿಯ ಹೆಸರು 'ಅಣ್ಣಪ್ಪ ಪಂಜುರ್ಲಿ' ಎಂಬ ನಾಮಾಂಕಿತದಿಂದ ಲೋಕವೆಲ್ಲಾ ಪ್ರಖ್ಯಾತಿಯನ್ನು ಪಡೆಯುತ್ತದೆ.

ಇದಾದ ನಂತರದಲ್ಲಿ ಧರ್ಮಸ್ಥಳದಲ್ಲಿ ಇಂದಿಗೂ ಕೂಡಾ 'ಅಣ್ಣಪ್ಪ ಪಂಜುರ್ಲಿಗೆ' ಮಹತ್ವದ ಸ್ಥಾನಮಾನವಿದೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ, ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥಸ್ವಾಮಿ ನೆಲೆಯೂರಲು ಅಣ್ಣಪ್ಪ ಪಂಜುರ್ಲಿಯೆ ಮುಖ್ಯ ಕಾರಣ ಎನ್ನುತ್ತಾರೆ.

"ಭಕ್ತರಿಂದ ವಜ್ರ ವೈಢೂರ್ಯ, ಬೆಳ್ಳಿ ಬಂಗಾರ ಬಂದರೆ ಅದು ಭಗವಂತನಿಗಿರಲಿ, ಅಲ್ಪ ಕಾಣಿಕೆ ಬಂದರೆ ಅದು ನನಗಿರಲಿ ನಾನು ಭಗವಂತನನ್ನು ಕಾಯುತ್ತಾ ಎಪ್ಪತ್ತು ಮೆಟ್ಟಿಲ ಗಿರಿಯೇರಿ ನಿಲ್ಲುವೆ. ಈ ಸ್ಥಳದಲ್ಲಿ ಯಾವುದೇ ಅಧರ್ಮವಾಗದಂತೆ ಧರ್ಮವನ್ನು ನಡೆಸಿಕೊಂಡು ಬನ್ನಿ" ಎಂದು ವಾಕ್ತನವನ್ನು ಅಣ್ಣಪ್ಪ ಪಂಜುರ್ಲಿ ನುಡಿಯುತ್ತಾನೆ.

ಇದರಿಂದಾಗಿ ಧರ್ಮಸ್ಥಳದಲ್ಲಿ ಎಪ್ಪತ್ತು ಮೆಟ್ಟಿಲನ್ನು ನಿರ್ಮಿಸಿ ಅದರ ಮೇಲೆ ಅಣ್ಣಪ್ಪ ಪಂಜುರ್ಲಿಗೆ ದೇವಾಲಯವನ್ನು ಕಟ್ಟಲಾಗಿದೆ. ಮುಂದಿನ ದಿನ ಮಾನದಲ್ಲಿ ಧರ್ಮಸ್ಥಳದಲ್ಲಿ ಧರ್ಮದ ನೆಲೆಯಾಗಿ ನಿಂತ ಈ ಧೈವಶಕ್ತಿ ಬೇರೆ ಬೇರೆ ಜಾಗಗಳಿಗೆ ತೆರಳುತ್ತಿದ್ದಂತೆ ಬೇರೆ ಬೇರೆ ಹೆಸರುಗಳಿಂದ ಇದನ್ನು ಕರೆಯಲು ಶುರು ಮಾಡುತ್ತಾರೆ.

**ಪಂಜುರ್ಲಿಯ ನಾನಾ ಹೆಸರುಗಳು:**

ಅಂಗಣ ಪಂಜುರ್ಲಿ, ಬರ್ನರ ಪಂಜುರ್ಲಿ, ಬಗ್ಗು ಪಂಜುರ್ಲಿ, ತೇಂಬಾಯಲು ಪಂಜುರ್ಲಿ, ವರ್ತೆ ಪಂಜುರ್ಲಿ, ಉಪ್ಪೆಟ್ಟು ಪಂಜುರ್ಲಿ, ಬೋಲಿದಡಿ ಪಂಜುರ್ಲಿ, ಬೋಳಿಯಾಲ ಪಂಜುರ್ಲಿ, ಬಲಾರ ಪಂಜುರ್ಲಿ, ಎಂಡೂರ್ಲ ಪಂಜುರ್ಲಿ, ಪಾಂಜೈ ಪಂಜುರ್ಲಿ, ಬೈಕಾಟ್ಟಿ ಪಂಜುರ್ಲಿ, ಭಕ್ತಿ ಪಂಜುರ್ಲಿ, ಕಲ್ಯಗೂಡು ಪಂಜುರ್ಲಿ, ಕದ್ರಿ ಪಂಜುರ್ಲಿ, ಕುಕ್ಕೆ ಪಂಜುರ್ಲಿ, ಕಾಂತಾವರ ಪಂಜುರ್ಲಿ, ಹಂಪದಾಡಿ ಪಂಜುರ್ಲಿ, ಹೀಗೆ ಕರಾವಳಿ ತೀರದಲ್ಲಿ ಪಂಜುರ್ಲಿ ಧೈವವನ್ನ ಭಕ್ತಿಯಿಂದ ಪೂಜಿಸಲಾಗುತ್ತದೆ.

**ಉಪಸಂಹಾರ:**

ಹೀಗೆ ಕರೆಯಲು ಶುರು ಮಾಡಿದ ನಾಡಿನ ಕರಾವಳಿ ಜನ ಅದನ್ನು ಭಕ್ತಿಯಿಂದ ಕಾಣುವುದು ಮಾತ್ರವಲ್ಲದದೇ ಅದರಂತೆ ವೇಷಗಳನ್ನು ಧರಿಸಿ ಕೋಲವನ್ನು ನಡೆಸಲು ಶುರು ಮಾಡಿದರು. ಈ ಕೋಲದಲ್ಲಿ ಜನರು ತಮ್ಮ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ.

ಆಸ್ತಿ ವಿಚಾರ, ಮದುವೆ ವಿಚಾರ, ನ್ಯಾಯ ಪಂಚಾಯ್ತಿ ಇನ್ನಿತರ ವಿಚಾರಗಳನ್ನು ಈ ಕೋಲ ನಡೆಯುವ ಸಂದರ್ಭದಲ್ಲಿ ಜನರು ಪಂಜುರ್ಲಿಯ ಮುಂದೆ ನಿಂತು ತಮ್ಮ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುತ್ತಾರೆ. ಅದರೊಂದಿಗೆ ಪಂಜುರ್ಲಿ ಹೇಳಿದಂತೆ ಚಾಚು ತಪ್ಪದೆ ನಡೆದುಕೊಳ್ಳುತ್ತಾರೆ. ಯಾವುದೇ ಕಾರಣಕ್ಕು ಅದನ್ನು ಮೀರಿ ಯಾರೂ ಕೂಡಾ ನಡೆಯುವುದಿಲ್ಲ. ಅಕಸ್ಮಾತ್ ನಡೆದರೆ ಅನಾಹುತ ತಪ್ಪಿದ್ದಲ್ಲ.

ನಮ್ಮ ಭಾರತದಲ್ಲಿ ಈ ರೀತಿಯ ಜಾನಪದ ಕಥೆಗಳನ್ನು ತಮ್ಮದೇ ಶೈಲಿಯಲ್ಲಿ ಕಟ್ಟಿ ಜನರು ಆ ದೇವರುಗಳನ್ನು ನಂಬುತ್ತಾರೆ. ಇದು ಕೇವಲ ತುಳುನಾಡಿನೊಂದರ ಕಥೆ ಮಾತ್ರವಲ್ಲ, ಬದಲಿಗೆ ನಾಡಿನಾದ್ಯಂತ ತಮ್ಮ ತಮ್ಮ ಗ್ರಾಮ ದೇವತೆಗಳಬಗ್ಗೆ ಅದರದ್ದೇ ಕಥೆಗಳಿರುತ್ತವೆ. ಈ ರೀತಿಯ ಕಥೆಗಳು ಎಷ್ಟರ ಮಟ್ಟಿಗೆ ಸತ್ಯವೋ ಸುಳ್ಳೋ ಗೊತ್ತಿಲ್ಲ. ಆದರೆ ದೇವರ ಮೇಲಿರುವ ಭಕ್ತಿ ಸುಳ್ಳಲ್ಲ.

.

**ಆಕಾರ ಗ್ರಂಥಗಳು:**

[1] ತುಳು ಜಾನಪದ,ಕೋಟಿ ಪರಿವ

**[2] ತುಳು ಯಕ್ಷಗಾನ,ಬೇತಾಕುಂಞ ಕುಲಾಲ್**